C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ - 23 ಪಿ. ಡಬ್ಲ್ಯೂ -16

ದಿನಾಂಕ : 01.03.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಬಿ. ಎಲ್. ಪುಟ್ಟೇಗೌಡ |
| ತಂದೆಯ ಹೆಸರು | ಲಿಂಗಯ್ಯ ಟಿ. |
| ವಯಸ್ಸು | 32 ವರ್ಷ |
| ಉದ್ಯೋಗ | ಪಿಗ್ ಫಾರಂ |
| ವಾಸ | ಬೂದಗುಪ್ಪೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನಾನು ಮಾರುತಿ ಸ್ವಿಫ್ಟ್ ಕಾರು ನಂಬರು ಕೆಎ.05.ಎಂಇ.5094 ರ ಮಾಲೀಕ ಈ ಪ್ರಕರಣದ ಘಟನೆ ನಡೆಯುವ ಒಂದು ವರುಷದ ಹಿಂದೆ ಸದರಿ ಕಾರನ್ನು ನನ್ನ ಚಿಕ್ಕಮ್ಮನ ಮಗ ಕಾರ್ತಿಕ್ ಗೆ ಕೊಟ್ಟಿದ್ದೆ. ಕಾರ್ತಿಕ್ ನನ್ನ ಕಾರನ್ನು ತೆಗೆದುಕೊಂಡು ಹೋದ ಸಮಯದಲ್ಲಿ ಸದರಿ ಕಾರು ಕಾರ್ತಿಕ್ ಮನೆಯ ಬಳಿಯೇ ನಿಂತಿರುತ್ತಿತ್ತು. ಸದರಿ ಕಾರಿನಲ್ಲಿದ್ದ ನನ್ನ ವಿಸಿಟಿಂಗ್ ಕಾರ್ಡನ್ನು ನೋಡಿ ಪೊಲೀಸರು ಸುಮಾರು 2-3 ವರುಷಗಳ ಹಿಂದೆ ನನಗೆ ಫೋನ್ ಮಾಡಿ ಸದರಿ ಕಾರಿನ ಮಾಲೀಕ ನೀವೇಯೇ ಎಂದು ಕೇಳಿದಾಗ ನಾನು ಹೌದು ಎಂದು ಹೇಳಿದೆ. ನಂತರ ನಾನು ಕಾರ್ತಿಕ್ ಗೆ ಫೋನ್ ಮಾಡಿ ವಿಚಾರಿಸಿದೆ. ಆದರ ಕಾರ್ತಿಕ್ ಏನನ್ನು ಹೇಳಲಿಲ್ಲ. ನಂತರ ಸದರಿ ಕಾರಿನಿಂದ ಯಾರಿಗೋ ಗುದ್ದಿದ್ದಾರೆ, ಕೈ ಕಡಿದಿದ್ದಾರೆ ಎಂದು ಗುತ್ತಾಯಿತು. ಈ ಬಗ್ಗೆ ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

2. ನಂತರ ವಿಚಾರ ತಿಳಿಯಲಾಗಿ ಸದರಿ ಕಾರನ್ನು :10.05.2021 ರಂದು ಬೆಳಿಗ್ಗೆ ಗೆಜ್ಜಲಗೆರೆಯ ವಾಸಿ ಇಂದುಕುಮಾರ ಹಾಗೂ ಸ್ವರುಪ್ ರವರು ಕಾರ್ತಿಕ್ ಮನೆಯ ಬಳಿ ಬಂದು ಅವರ ಸಂಬಂಧಿಕರಿಗೆ

ಯಾರಿಗೋ ಹುಷಾರಿಲ್ಲ ಅವರನ್ನು ಆಸ್ಪತ್ರೆಗೆ ಕರದುಕೊಂಡು ಹೋಗಬೇಕು ಸ್ವಲ್ಪ ಕಾರನ್ನು ಕೊಡು ಕೊಡುತ್ತೇನೆಂದು ಹೇಳಿ ಪಡೆದುಕೊಂಡು ಹೋಗಿದ್ದ ವಿಚಾರ ಗೊತ್ತಾಯಿತು ಎಂದರೆ ಸಾಕ್ಷಿ ಒಂದು ಬಾರಿ ಹೌದು ಎಂದೂ, ಮತ್ತೊಂದು ಬಾರಿ ಇಲ್ಲವೆಂದು ನುಡಿದಿದ್ದಾರೆ. ನಂತರ ಪೊಲೀಸರು ಈ ಕೇಸಿನ ವಿಚಾರ ತಿಳಿಯಲಾಗಿ ಸದರಿ ಕಾರನ್ನು ಆರೋಪಿಗಳು ತೆಗೆದುಕೊಂಡು ಹೋಗಿ ಮೃತ ಹೇಮಂತ ಕುಮಾರ ಹಾಗೂ ಸುನಿಲ್ ಕುಮಾರ ಹೋಗುತ್ತಿದ್ದ ಮೋಟಾರು ಸೈಕಲ್ಲು ಹಿಂಭಾಗಕ್ಕೆ ಗುದ್ದಿ ಬೀಳಿಸಿ ಹೇಮಂತ ಕುಮಾರನಿಗೆ ಲಾಂಗುಗಳಿಂದ ಹೊಡೆದು ಡ್ರಾಗನ್ ನಿಂದ ಚುಚ್ಚಿ, ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ಸುನಿಲ್ ಕುಮಾರನ ಕೊಲೆಗೆ ಯತ್ನಿಸಿದ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯಲ್ಲಿರುವ ಸದರಿ ಭಾಗವನ್ನು ನಿಪಿ.81 ಎಂದು ಗುರುತಿಸಲಾಯಿತು.

3. ಆರೋಪಿಗಳು ನನಗೆ ಮೊದಲಿನಿಂದಲೂ ಪರಿಚಿತರು ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿ ಪರವಾಗಿ ವಕೀಲರಿಂದ ಃ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.